**ದಿನಾಂಕ: 09/09/2021 ರಂದು ಗುರುವಾರ ಮಧ್ಯಾನ 2:00 ಗಂಟೆಗೆ ನಾಗಮಂಗಲ ತಾಲ್ಲೂಕಿನ ಬೆಳ್ಳೂರು ಉಪ ವಿಭಾಗ ಕಛೇರಿ ಅವರಣದಲ್ಲಿ ನಡೆದ ಜನಸಂಪರ್ಕ ಸಭೆಯ ನಡಾವಳಿಗಳು.**

**ಹಾಜರಿದ್ದ ಅಧಿಕಾರಿಗಳು / ನೌಕರರು.**

ಶ್ರೀ/ಶ್ರೀಮತಿ/ಕುಮಾರಿ:

| | |
|---|---|
| 1). ಹೇಮಲತಾ.ಟಿ | : ಕಾರ್ಯನಿರ್ವಾಹಕ ಇಂಜಿನಿಯರ್(ವಿ), ನಾಗಮಂಗಲ ವಿಭಾಗ |
| 2) ರವಿಕುಮಾರ | : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ತಾಂ), ನಾಗಮಂಗಲ ವಿಭಾಗ |
| 3) ನಾಗರಾಜು | : ಲೆಕ್ಕಾಧಿಕಾರಿ, ನಾಗಮಂಗಲ ವಿಭಾಗ |
| 4) ಹೇಮಾ | : ಸಹಾಯಕ ಇಂಜಿನಿಯರ್(ತಾ), ಬೆಳ್ಳೂರು ಉಪ ವಿಭಾಗ |
| 5) ವೇಣುಗೋಪಾಲ | : ಪ್ರಭಾರ ಸಹಾಯಕ ಇಂಜಿನಿಯರ್(ವಿ), ಬೆಳ್ಳೂರು ಶಾಖೆ |
| 6) ದಿಲೀಪ್.ಎಸ್.ಜಿ | : ಕಿರಿಯ ಇಂಜಿನಿಯರ್(ವಿ), ಬಿಂಡಿಗನವಿಲೆ ಶಾಖೆ |
| 7) ನವೀನ ಕುಮಾರ್ | : ಕಿರಿಯ ಇಂಜಿನಿಯರ್(ವಿ), ಕದಬಹಳ್ಳಿ ಶಾಖೆ |

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ಉಪವಿಭಾಗ ಬೆಳ್ಳೂರು ರವರು ಸಭೆಗೆ ಹಾಜರಿದ್ದ ಎಲ್ಲಾ ಅಧಿಕಾರಿ/ ನೌಕರರನ್ನು ಹಾಗೂ ವಿದ್ಯುತ್ ಗ್ರಾಹಕರನ್ನು ಸ್ವಾಗತಿಸಿದರು.

ವಿದ್ಯುತ್ ಗ್ರಾಹಕರ ಕುಂದು ಕೊರತೆಗಳನ್ನು ಆಲಿಸಿ ಬಗೆಹರಿಸುವ ನಿಟ್ಟಿನಲ್ಲಿ ಪ್ರತಿ ಮೂರು ತಿಂಗಳಿಗೊಮ್ಮೆ ಜನ ಸಂಪರ್ಕ ಸಭೆಯನ್ನು ನಡೆಸುವಂತೆ ಕೆ.ಇ.ಆರ್.ಸಿ ರವರಿಂದ ಆದೇಶವಾಗಿರುತ್ತದೆ. ವಿದ್ಯುತ್ ದರವನ್ನು ಪರಿಷ್ಕರಿಸುವ ಸಂದರ್ಭದಲ್ಲಿ ವಿದ್ಯುತ್ ಬಳಕೆದಾರರ ಒಪ್ಪಿಗೆಯ ಅವಶ್ಯಕತೆ ಇರುತ್ತದೆ. ಶಾಖಾಧಿಕಾರಿಗಳು ವಿದ್ಯುತ್ ಬಳಕೆದಾರರ ಸಮಸ್ಯೆಗಳಿಗೆ ಸ್ಪಂದಿಸುವ ಕುರಿತು ಹಾಗೂ ಗ್ರಾಹಕರಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ಬಗ್ಗೆ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸೆಸ್ಕ್ ಕಾರ್ಯ ಮತ್ತು ಪಾಲನಾ ವೃತ್ತ, ಮಂಡ್ಯ ರವರು ವಿದ್ಯುತ್ ಸಂಬಂಧಿತ ದೂರುಗಳನ್ನು ಮೌಖಿಕವಾಗಿ / ಲಿಖಿತವಾಗಿ ಸಲ್ಲಿಸುವಂತೆ ವಿದ್ಯುತ್ ಗ್ರಾಹಕರಲ್ಲಿ / ಸಾರ್ವಜನಿಕರಲ್ಲಿ ಕೇಳಲಾಯಿತು.

ಈ ಹಿಂದಿನ ಸಭೆಯಲ್ಲಿ ನೀಡಲಾದ ದೂರುಗಳನ್ನು ಹಾಗೂ ಅದರ ಬಗ್ಗೆ ತೆಗೆದುಕೊಂಡ ಕ್ರಮಗಳನ್ನು ಮೊದಲು ಪರಿಶೀಲಿಸಲಾಯಿತು. ಎಲ್ಲಾ ದೂರುಗಳನ್ನು ಪರಿಹರಿಸಿರುವುದಾಗಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ತಿಳಿಸಿದರು.

**1)ಶ್ರೀ. ಪ್ರಕಾಶ್, ಸಂತೇಕೊಪ್ಪಲು ಮೊಬೈಲ್ ನಂ:-8971647359**

ದೂರು:- ಅಕ್ರಮ ಸಕ್ರಮ ಯೋಜನೆಯಡಿ ಹಣ ಪಾವತಿಸಿದ್ದು ಹೊಸದಾಗಿ 25 ಕೆ.ವಿ.ಎ ಪರಿವರ್ತಕ ಅಳವಡಿಸಿಕೊಡಲು ಕೋರಿದರು.

ಕ್ರಮ:- ಹಣ ಕಟ್ಟಿರುವ ಮಾಹಿತಿಯನ್ನು ಪಡೆದು ಹಾಲಿ ಇರುವ ಪರಿವರ್ತಕ ಅಧಿಕ ಬಾರವಾಗಿದಲ್ಲಿ ಹೊಸದಾಗಿ 25 ಪರಿವರ್ತಕ ಅಳವಡಿಸಲು ಅಂದಾಜುಪಟ್ಟಿ ತಯಾರಿಸಿ ವಿಭಾಗ ಕಛರಿಗೆ ಸಲ್ಲಿಸಲು ಆದೇಶಿಸಿದರು.

**2)ಶ್ರೀ ನಾಗರಾಜು, ಪಿ.ನೇರಲೆಕೆರೆ ಮೊಬೈಲ್ ನಂ:-9448747971**

ದೂರು:- ಅಕ್ರಮ ಸಕ್ರಮ ಯೋಜನೆಯಡಿ ಅಳವಡಿಸಿರುವ ಪರಿವರ್ತವನ್ನು ಚಾಲನೆಗೋಳಿಸಲು ಮನವಿ ಮಾಡಿರುತ್ತಾರೆ.

ಕ್ರಮ:- ಕೂಡಲೆ ಪರಿವರ್ತಕವನ್ನು ಚಾಲನೆಗೋಳಿಸಲು ಸೂಚಿಸಿಲಾಗಿದೆ.

**3)ಶ್ರೀ. ಸುರೇಶ, ವಡೇರಹಳ್ಳಿ ಮೊಬೈಲ್ ನಂ:-**

ದೂರು:- ಅಕ್ರಮ ಸಕ್ರಮ ಯೋಜನೆಯಡಿ ಹಣ ಪಾವತಿಸಿದ್ದು ಹೊಸದಾಗಿ 25 ಕೆ.ವಿ.ಎ ಪರಿವರ್ತಕ ಅಳವಡಿಸಿಕೊಡಲು ಕೋರಿದರು.

ಕ್ರಮ:- ಹಣ ಕಟ್ಟಿರುವ ಮಾಹಿತಿಯನ್ನು ಪಡೆದು ಹಾಲಿ ಇರುವ ಪರಿವರ್ತಕ ಅಧಿಕ ಬಾರವಾಗಿದಲ್ಲಿ ಹೊಸದಾಗಿ 25 ಪರಿವರ್ತಕ ಅಳವಡಿಸಲು ಅಂದಾಜುಪಟ್ಟಿ ತಯಾರಿಸಿ ವಿಭಾಗ ಕಛೇರಿಗೆ ಸಲ್ಲಿಸಲು ಆದೇಶಿಸಿದರು.

**4) ಶಂಕರೇಗೌಡ, ವಿದ್ಯುತ್ ಗುತ್ತಿದಾರರು ಬೆಳ್ಳೂರು ಕ್ರಾಸ್ ಮೊಬೈಲ್ ನಂ:-**

ದೂರು:- ಸರ್ವಿಸ್ ಕನೆಕ್ಷನ್ ಕಾಮಗಾರಿಯಡಿ ಅಕ್ಷರಾ ಪೌಂಡೇಷನ್ ಶಾಲೆಗೆ ಹೂಸದಾಗಿ 63 ಕೆ.ವಿ.ಎ ಪರಿವರ್ತಕ ನೀಡಲು ಕೋರಿದರು.

ಕ್ರಮ:- ಉಗ್ರಾಣದಲ್ಲಿ 63 ಕೆ.ವಿ.ಎ ಪರಿವರ್ತಕ ಲಭ್ಯವಿಲ್ಲದ ಕಾರಣ ಮೇಲಾಧಿಕಾರಿಗಳಿಗೆ ಮನವಿಯನ್ನು ಸಲ್ಲಿಸಿದ್ದು 63 ಕೆ.ವಿ.ಎ ಪರಿವರ್ತಕ ಉಗ್ರಾಣಕ್ಕೆ ಬಂದ ತಕ್ಷಣ ನೀಡಲು ತಿಳಿಸಲಾಯಿತ್ತು.

**5) ಮಂಜೇಶ್ ಜಿ.ಕೆ, ವಿದ್ಯುತ್ ಗುತ್ತಿದಾರರು, ಚೌಡೆನಹಳ್ಳಿ ಮೊಬೈಲ್ ನಂ:-**

ದೂರು:- ಸರ್ವಿಸ್ ಕನೆಕ್ಷನ್ ಕಾಮಗಾರಿಗಳಿಗೆ 8 ಮೀ ಪಿ.ಎಸ್.ಸಿ ಕಂಬ ಅವಶ್ಯಕತೆ ಇರುವುದರಿಂದ ವ್ಯವಸ್ಥೆಮಾಡಿಕೊಡಲು ಮನವಿ ಮಾಡಿದರು.

ಕ್ರಮ:- ಉಗ್ರಾಣಕ್ಕೆ ಕಳೆದ ಎರಡು ತಿಂಗಳಿದ 8 ಮೀ ಪಿ.ಎಸ್.ಸಿ ಕಂಬ ಲಭ್ಯವಿಲ್ಲದ ಕಾರಣ ಮೇಲಾಧಿಕಾರಿಗಳಿಗೆ ಮನವಿಯನ್ನು ಸಲ್ಲಿಸಿದ್ದು 8 ಮೀ ಪಿ.ಎಸ್.ಸಿ ಕಂಬಗಳು ಉಗ್ರಾಣಕ್ಕೆ ಬಂದ ತಕ್ಷಣ ನೀಡಲು ತಿಳಿಸಲಾಯಿತ್ತು.

ಮೇಲ್ಕಂಡ ದೂರುಗಳಿಗೆ ತೆಗೆದುಕೊಂಡ ಕ್ರಮಗಳ ಬಗ್ಗೆ ಅನುಪಾಲನಾ ವರದಿಯನ್ನು ಮುಂದಿನ ಜನಸಂಪರ್ಕ ಸಭೆಯಲ್ಲಿ ಹಾಜರುಪಡಿಸುವಂತೆ ಉಪವಿಭಾಗಾಧಿಕಾರಿಗಳಿಗೆ ಸೂಚಿಸಲಾಯಿತು.

ಸಹಾಯಕ ಇಂಜಿನಿಯರ್(ತಾ), ಬೆಳ್ಳೂರು ಉಪ ವಿಭಾಗರವರು ಸಭೆಯಲ್ಲಿ ಭಾಗವಹಿಸಿದ್ದ ಎಲ್ಲಾ ಅಧಿಕಾರಿಗಳು/ನೌಕರರು ಹಾಗೂ ಗ್ರಾಹಕರುಗಳಿಗೆ ವಂದನಾರ್ಪಣೆ ಸಲ್ಲಿಸಿದ ನಂತರ ಸಭೆಯನ್ನು ಸಂಜೆ 05:30 ಗಂಟೆಗೆ ಮುಕ್ತಾಯಗೊಳಿಸಲಾಯಿತು.

ದೂರನ್ನು ನೀಡಿದ ಗ್ರಾಹಕರ ಸಂಖ್ಯೆ-5

ಒಟ್ಟು ದೂರು/ಸಮಸ್ಯೆಗಳು-5

ಮೆಮೊ ಸಂಖ್ಯೆ:ಸಕಾನಿಇಂ(ವಿ)/ಸಇಂ(ತಾ)/ಬೆ/21-22/ ದಿನಾಂಕ: 12-09-21

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಚಾ.ವಿ.ಸ.ನಿ.ನಿ, ಕಾ ಮತ್ತು ಪಾ ಉಪ ವಿಭಾಗ,
ಬೆಳ್ಳೂರು.

<u>ಪ್ರತಿಯನ್ನು ಇವರ ದಯಾಪರ ಅವಗಾಹನೆಗಾಗಿ ಸಲ್ಲಿಸಲಾಗಿದೆ.</u>

1. ಮುಖ್ಯ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ವಲಯ ಮೈಸೂರು.
2. ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ), ಸೆಸ್ಕ್, ನಿಗಮ ಕಾರ್ಯಾಲಯ ಮೈಸೂರು.
3. ಅಧೀಕ್ಷಕ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ವೃತ್ತ ಮಂಡ್ಯ.
4. ಕಾರ್ಯನಿರ್ವಾಹಕ ಇಂಜಿನಿಯರ್(ವಿ),ಚಾ.ವಿ.ಸ.ನಿ.ನಿ., ಕಾ ಮತ್ತು ಪಾ ವಿಭಾಗ ನಾಗಮಂಗಲ.

<u>ಪ್ರತಿಯನ್ನು ಇವರ ಮಾಹಿತಿಗಾಗಿ ಕಳುಹಿಸಲಾಗಿದೆ.</u>

1. ಲೆಕ್ಕಾಧಿಕಾರಿ, ಚಾ.ವಿ.ಸ.ನಿ.ನಿ., ಕಾ ಮತ್ತು ಪಾ ವಿಭಾಗ ನಾಗಮಂಗಲ.
2. ಲೆಕ್ಕಾಧಿಕಾರಿ, (ಆಂಪ) ಚಾ.ವಿ.ಸ.ನಿ.ನಿ., ಪಾಂಡವಪುರ.
3. ಶಾಖಾಧಿಕಾರಿ, ಚಾ.ವಿ.ಸ.ನಿ.ನಿ., ಕಾ ಮತ್ತು ಪಾ ಶಾಖೆ ಬೆಳ್ಳೂರು/ಬಿಂಡಿಗನವಿಲೆ/ಕದಬಹಳ್ಳಿ.
4. ಕಿಆಸ/ಮು.ಕ